**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ,**

**ಸಿದ್ದಾಪುರ**

**ಸಿ.ಸಿ ನಂ. 308/2025**

ಫಿರ್ಯಾದಿಃ ಮ್ಯಾನೇಜರ್, ಜನತಾ ಕೋ-ಆಪೇರೇಟಿವ್ ಕ್ರೇಡಿಟ್ ಸೊಸೈಟಿ ಲಿಮಿಟೆಡ್ ಭಟ್ಕಳ, ಸಿದ್ದಾಪುರ ಶಾಖೆ, ಸಿದ್ದಾಪುರ (ಉ.ಕ)

-ವಿರುದ್ದ-

ಆರೋಪಿಃ ಶ್ರೀಮತಿ ಭಾರತಿ ಗಂಡ ಶಿವರಾಮ ಗೌಡ
ವಯಸ್ಸುಃ ಪ್ರಯಸ್ಥ, ವಾಸಃ 677, ಮಾರಬೈಲ್, ಕೊಂಡ್ಲಿ,
ಪೋಸ್ಟಃ ಕೊಂಡ್ಲಿ,ತಾಃ ಸಿದ್ದಾಪುರ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆ ಕಲಂ 351 ರಡಿ ಆರೋಪಿಯ ಹೇಳಿಕೆ**

**ಪ್ರಶ್ನೆಃ1** ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀಯಾ?

**ಉತ್ತರಃ**

**ಪ್ರಶ್ನೆಃ** 2. **ಫ್ರಾಸಾ-1 ಶ್ರೀ ಶಾಂತಿಭೂಷಣ ಮಹಾಬಲೇಶ್ವರ ನಾಯ್ಕ, ಮ್ಯಾನೇಜರ್** ತಮ್ಮ ಸಾಕ್ಷ್ಯದಲ್ಲಿ ಹೇಳಿದ್ದೇನೆಂದರೆ, ನ್ಯಾಯಾಲಯದ ವ್ಯಾಪ್ತಿಯಲ್ಲಿರುವ ಫಿರ್ಯಾದುದಾರರು ಜನತಾ ಕೋ-ಆಪೇರೇಟಿವ್ ಕ್ರೇಡಿಟ್ ಸೊಸೈಟಿ ಲಿಮಿಟೆಡ್ ಸಂಸ್ಥೆಯು ಕರ್ನಾಟಕ ಸೌಹಾರ್ದಾ ಕೋ-ಆಪರೇಟಿವ್ ಕಾಯ್ದೆ ರಡಿಯಲ್ಲಿ ನೊಂದಾಯಿತ ಸಂಸ್ಥೆಯಾಗಿದ್ದು ಹಣಕಾಸು ವ್ಯವಹಾರ, ಅಗತ್ಯವಿರುವವರಿಗೆ ಹಣವನ್ನು ಸಾಲವಾಗಿ ನೀಡುವ ಸೌಹಾರ್ದ ಸಹಕಾರಿ ಸಂಸ್ಥೆಯಾಗಿದ್ದು, ಆರೋಪಿತಳಾದ ನೀನು ಫಿರ್ಯಾದುದಾರರ ಸಹಕಾರಿ ಸಂಸ್ಥೆಯಲ್ಲಿ ಸಾಲಕ್ಕಾಗಿ ಮನವಿ ಮಾಡಿದ್ದು, ನಂತರ ದಿನಾಂಕ 08.11.2021 ರಂದು ರೂ.1,00,000/- ಗಳನ್ನು ಸಾಲ ಪಡೆದಿರುತ್ತೀಯಾ ಎಂದು ಸಾಕ್ಷವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 3 ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಆರೋಪಿತಳಾದ ನೀನು ಸಾಲದ ಕಂತುಗಳನ್ನು ಸರಿಯಾಗಿ ಪಾವತಿ ಮಾಡದೆ ಇದ್ದು, ಸದರಿ ಸಾಲದ ಈಗಿನ ಬಾಕಿ ಮೊತ್ತವು ರೂ.1,41,000/- ಆಗಿದ್ದು ಹಾಗೂ ಫಿರ್ಯಾದುದಾರರ ಸಂಸ್ಥೆಯು ಹಲವು ಬಾರಿ ಸಾಲದ ಮರುಪಾವತಿಗಾಗಿ ಬೇಡಿಕೆ ಇಟ್ಟಿದ್ದು, ಸದರಿ ಸಾಲದ ಬಾಬ್ತಿಗಾಗಿ ದಿನಾಂಕ 20.05.2025 ರಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸಿದ್ದಾಪುರ ಶಾಖೆಯ ಚೆಕ್ಕಿನ ಸಂಖ್ಯೆ: 827781 ನ ರೂ.1,41,000/- ನ ಚೆಕನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 4. ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ತದನಂತರ ಸಹಕಾರಿ ಸಂಸ್ಥೆಯು ಸದರಿ ಚೆಕನ್ನು ನಗದು ಗೊಳಿಸಲು ಕೆನರಾ ಬ್ಯಾಂಕ್, ಸಿದ್ದಾಪುರ ಶಾಖೆಗೆ ಹಾಕಿದಾಗ ನಿನ್ನ ಖಾತೆಯಲ್ಲಿ ಸಾಕಷ್ಟು ಹಣ ಇರದ ಕಾರಣ ದಿಃ 23.05.2025 ರಂದು "Funds Insufficient" ಎಂಬ ಹಿಂಬರಹದೊಂದಿಗೆ ವಾಪಸ್ ಬಂದಿರುವುದಾಗಿ ಮತ್ತು ಸದರಿ ವಿಷಯವನ್ನು ದಿಃ 21.06.2025 ರಂದು ಅವರ ವಕೀಲರ ಮೂಲಕ ನೋಟಿಸ್ಸು ನೀಡಿ ತಿಳಿಸಿರುವುದಾಗಿ, ಸದರಿ ನೋಟಿಸ್ಸು ದಿನಾಂಕ: 27.06.2025 ರಂದು ನಿಮಗೆ ತಲುಪಿದ್ದರೂ ಸಹ ಸದರಿ ಹಣವನ್ನು ನೀನು ಮರುಪಾವತಿ ಮಾಡದೇ **ನೆಗೋಷ್ಯಬಲ್ ಇನ್ಸ್ಟುಮೆಂಟ ಆಕ್ಟ, 138** ರ ಅಡಿಯಲ್ಲಿ ಅಪರಾದ ಎಸುಗಿರುವಿರೆಂದು ನಿನ್ನ ಮೇಲೆ ಆರೋಪಣೆ ಇದೆ ಮತ್ತು ಸದ್ರಿ ಆರೋಪಣೆಯನ್ನು ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀಯಾ ಎಂದು ಆರೋಪಿಸಲಾಗಿದೆ. ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ-**

**ಪ್ರಶ್ನೆಃ 5. ಫ್ರಾಸಾಃ1** ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು, ಪ್ರಕರಣದ ಕೆಳಗಿನ ದಾಖಲಾತಿಗಳನ್ನು ಫಿರ್ಯಾದುದಾರರು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ತಾನು ಈ ಪ್ರಕರಣದಲ್ಲಿ ಪಿರ್ಯಾದಿ ಸೊಸೈಟಿಯ ವ್ಯವಸ್ಥಾಪಕನಾಗಿರುತ್ತೇನೆ. ಈ ದಿನ ಸತ್ಯಾಪನಾ ಹೇಳಿಕೆಯ ಪ್ರಮಾಣ ಪತ್ರವನ್ನು ಪತ್ರ ರೂಪದಲ್ಲಿ ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯ ಮತ್ತು ಅದನ್ನು ತಾನೇ ತಮ್ಮ ವಕೀಲರಿಗೆ ಹೇಳಿ ಬರೆಸಿ, ಸಹಿ ಮಾಡಿರುತ್ತೇನೆ ಎಂದು, ಆರೋಪಿ ದಿಃ 20-05-2025 ರ

ಎಸ್ ಬಿ ಐ ಬ್ಯಾಂಕ್ ನ ಚೆಕ್ ನೀಡಿದ್ದು, ಸದರಿ ಚೆಕ್ ನ್ನು ನಿ.ಪಿ–1 ಎಂದು, ಸದರಿ ನಿ.ಪಿ–1 ರಲ್ಲಿರುವ ಆರೋಪಿಯ ಸಹಿಯನ್ನು ನಿ.ಪಿ–1(ಎ) ಎಂದು, ಸದರಿ ನಿ.ಪಿ–1 ಚೆಕ್ ಅಮಾನ್ಯಗೊಂಡ ಬಗ್ಗೆ ಒಂದು ಬ್ಯಾಂಕ್ ಹಿಂಬರಹವನ್ನು ನಿ.ಪಿ–2 ಎಂದು, ಸದರಿ ನಿ.ಪಿ–1 ಅಮಾನ್ಯಗೊಂಡ ಬಗ್ಗೆ ದಿಃ 21–06–2025 ರಂದು ಆರೋಪಿಗೆ ನೀಡಿದ ಲೀಗಲ್ ನೋಟೀಸ್ ನ ಕಚೇರಿ ಪ್ರತಿಯನ್ನು ನಿ.ಪಿ–3 ಎಂದು, ಒಂದು ಅಂಚೆ ರಶೀಧಿಯನ್ನು ನಿ.ಪಿ–4 ಎಂದು, ಸದರಿ ನಿ.ಪಿ–3 ನೋಟೀಸ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟೀಸ್ ಆರೋಪಿಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ನಿ.ಪಿ–5 ಎಂದು, ದಿಃ 07–05–2025 ರ ಪಿರ್ಯಾದಿ ಸೊಸೈಟಿಯ ರೆಸಲ್ಯೂಷನ್ ಅದನ್ನು ನಿ.ಪಿ–6 ಎಂದು ಗುರುತಿಸಿ ಸಾಕ್ಷ್ಯವನ್ನು ನುಡಿದಿರುತ್ತಾರೆ, ಇದಕ್ಕೆ ನೀನು ಏನು ಹೇಳುತ್ತೀಯಾ?

**ಉತ್ತರಃ–**

**ಪ್ರಶ್ನೆಃ 6** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 827781 ನಿಮ್ಮ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತಾ ನಂ. 64194209684 ಖಾತೆಗೆ ಸಂಬಂಧಿಸಿದ ಚೆಕ್ ಆಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 7** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 827781 ಮೇಲಿನ ಸಹಿ ನಿಮ್ಮದೇ ಎಂದು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 8** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ–1 ಚೆಕ್ಕಿನ ನಂ 827781 ನ್ನು ಪಿರ್ಯಾದಿ ಸೊಸೈಟಿಗೆ ನೀಡಿರುವುದಾಗಿ ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

**ಪ್ರಶ್ನೆಃ 9** ಪಿರ್ಯಾದಿ ಸೊಸೈಟಿಯಿಂದ ದಿನಾಂಕ 08.11.2021 ರಂದು ರೂ. 1,00,000/– ಸಾಲವನ್ನು ಪಡೆದಿರುವಿರಾ?

**ಉತ್ತರಃ**

**ಪ್ರಶ್ನೆ: 10** ಈ ಪ್ರಕರಣದಲ್ಲಿ ಹಾಜರು ಪಡಿಸಿದ ನಿ.ಪಿ-1 ಚೆಕ್ಕಿನ ನಂ 827781 ದಿನಾಂಕ 20.05.2025 ರಲ್ಲಿ ನಮೂದಿಸಿದ ರೂ.1,41,000/- ನ್ನು (ಒಂದು ಲಕ್ಷದ ನಲವತ್ತೊಂದು ಸಾವಿರಗಳು ಮಾತ್ರ) ಪಿರ್ಯಾದಿ ಸೊಸೈಟಿಗೆ ಪಾವತಿ ಮಾಡುವ ಭಾಧ್ಯತೆಯನ್ನು ನೀವು ಒಪ್ಪಿಕೊಳ್ಳುವಿರಾ?

**ಉತ್ತರಃ**

ಪ್ರಶ್ನೆಃ **11** ಈ ಹಂತದಲ್ಲಿ ಈ ಪ್ರಕರಣವನ್ನು ರಾಜೀ ಮಾಡಿಕೊಳ್ಳಲು ಇಚ್ಚಿಸುವಿರಾ?

**ಉತ್ತರಃ**

ಪ್ರಶ್ನೆಃ **12**. ಈ ಪ್ರಕರಣದಲ್ಲಿ ನಿನಗೆ ಇನ್ನು ಏನಾದರೂ ಹೇಳುವುದು ಇದೆಯೇ ?

**ಉತ್ತರಃ**

ಪ್ರಶ್ನೆಃ **13**. ನಿನ್ನ ಪರವಾಗಿ ಏನಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುವಿರಾ?

**ಉತ್ತರಃ**

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕಃ **13-11-2025** ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ಸಿದ್ದಾಪುರ.**

**ಪ್ರಶ್ನೆಃ 10** ಪಿರ್ಯಾದಿ ಸೊಸೈಟಿಯಿಂದ ಪಡೆದ ಸಾಲದ ಹಣದಿಂದ TOYOTA GLANZA V.(AMT) Petrol vehicle bearing KA.No.31-P-9678 ನ್ನು ಖರೀದಿಸಿರುವಿರಾ?

**ಉತ್ತರಃ**

**ಪ್ರಶ್ನೆಃ 11** ನೀವು ಪಿರ್ಯಾದಿ ಸೊಸೈಟಿಯಲ್ಲಿ ಸಾಲದ ಖಾತೆ ನಂಃ 00201001183 ನ್ನು ಹೊಂದಿರುವಿರಾ?

**ಉತ್ತರಃ**